ರಾಜ್ಯದ ವಯಸ್ಕರ ಶಿಕ್ಷಣ ಸಾಕ್ಷರತಾ ಪ್ರಮಾಣಕ್ಕೆ ಪ್ರೋತ್ಸಾಹ

664 (657) ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ) : ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶು ಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಸಾಕ್ಷರತಾ ಪ್ರಮಾಣ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಸಾಕ್ಷರತಾ ಪ್ರಮಾಣ ಹೆಚ್ಚಿಸಲು ಸರಕಾರ ಕೈಗೊಂಡಿರುವ ಕ್ರಮಗಳೇನು;

ಇ) ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವ ಪ್ರೇರಕ ಮತ್ತು ಉಪ ಪ್ರೇರಕರಿಗೆ ನೀಡುತ್ತಿರುವ ಪ್ರೋತ್ಸಾಹ ಧನವೆಷ್ಟು;

ಈ) ಪ್ರೇರಕ ಮತ್ತು ಉಪ ಪ್ರೇರಕರಿಗೆ ಪ್ರೋತ್ಸಾಹ ಧನ ನೀಡಲು ಸರಕಾರಕ್ಕಿರುವ ತೊಂದರೆಗಳೇನು?

ಶ್ರೀ ರೇವೂನಾಯಕ್ ಬೆಳಮಗಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶು ಸಂಗೋಪನೆ ಸಚಿವರು) :

ಅ) 2011ರ ಜನಗಣತಿ ಪ್ರಕಾರ ರಾಜ್ಯದ ಒಟ್ಟು ಸಾಕ್ಷರತಾ ಪ್ರಮಾಣ ಲಭ್ಯವಿದ್ದು, ಶೇ.75.60ರಷ್ಟು ಇದೆ. ಜಿಲ್ಲಾವಾರು ಸಾಕ್ಷರತಾ ಪ್ರಮಣ ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ರಾಜ್ಯದ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಲು ಲೋಕ ಶಿಕ್ಷಣ ಇಲಾಖಾ ವತಿಯಿಂದ 15+ ವಯೋಮಾನದ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ **ಸಾಕ್ಷರ ಭಾರತ್ ಕಾರ್ಯಕ್ರಮ:**

ರಾಜ್ಯದಲ್ಲಿ 2001ರ ಜನಗಣತಿ ಪ್ರಕಾರ ಶೇ.50ಕ್ಕಿಂತ ಕಡಿಮೆ ಮಹಿಳಾ ಸಾಕ್ಷರತಾ ಪ್ರಮಾಣ ಇರುವ ರಾಜ್ಯದ ಗದಗ್, ಬೀದರ್, ಬಾಗಲಕೋಟೆ, ಕೊಪ್ಪಳ ಮಂಡ್ಯ, ಹಾವೇರಿ, ಬೆಳಗಾವಿ, ಚಿತ್ರದುರ್ಗ, ಬೆಂಗಳೂರು ಗ್ರಾ, ಬಳ್ಳಾರಿ, ಬಿಜಾಪುರ, ಕೋಲಾರ, ಮೈಸೂರು, ರಾಯಚೂರು, ಚಾಮರಾಜನಗರ, ತುಮಕೂರು, ಗುಲ್ಬರ್ಗಾ ಮತ್ತು ಯಾದಗಿರ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಕಾರ್ಯಕ್ರಮದಲ್ಲಿ 4091194 ಜನ 15+ ವಯೋಮಿತಿಯ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಿ ದಿನಾಂಕ: 31.03.2012ರ ಅವಧಿಗೆ ರಾಜ್ಯದ ಸಾಕ್ಷರತಾ ಪ್ರಮಾಣವನ್ನು ಶೇ.80–85 ಕ್ಕೆ ಹೆಚ್ಚಿಸುವ ಗುರಿ ಹೊಂದಿದೆ.

ಹಿಂದುಳಿದ ತಾಲ್ಲೂಕುಗಳಲ್ಲಿ ಸಾಕ್ಷರತಾ ಕಾರ್ಯಕ್ರಮ:

ಸಾಕ್ಷರ ಭಾರತ್ ಜಿಲ್ಲೆಗಳನ್ನು ಹೊರತುಪಡಿಸಿ ಡಾ॥ ಡಿ.ಎಂ.ನಂಜುಂಡಪ್ಪ ವರದಿಯನ್ವಯ ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ, ದಾವಣಗೆರೆ, ಉತ್ತರ ಕನ್ನಡ ಮತ್ತು ಬೆಂಗಳೂರು ನಗರ ಜಿಲ್ಲೆಗಳ ಹಿಂದುಳಿದ 21 ತಾಲ್ಲೂಕುಗಳಲ್ಲಿ ಒಟ್ಟು 2550 ಕಲಿಕಾ ಕೇಂದ್ರಗಳ ಮೂಲಕ 25550 ಅನಕ್ಷರಸ್ಥರನ್ನಾಗಿಸಲು ಸಾಕ್ಷರತೆ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಪ್ರಸ್ತುತ ರಾಜ್ಯದ 18 ಜಿಲ್ಲೆಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಸಾಕ್ಷರ ಭಾರತ್ ಕಾರ್ಯಕ್ರಮದಡಿಯಲ್ಲಿ ಪ್ರತಿ ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಕೇಂದ್ರದಲ್ಲಿ ಇಬ್ಬರು ಪ್ರೇರಕರನ್ನು ಯೋಜನಾ ಅವಧಿಗೆ ಗೊತ್ತುಪಡಿಸಿ ಕೊಳ್ಳಲಾಗಿದ್ದು ಇವರಿಗೆ ಮಾಹೆಯಾನ ರೂ. 2000/–ಗಳಂತೆ ಗೌರವಧನ ನೀಡಲಾಗುತ್ತಿದೆ. ಈ ಯೋಜನೆಯಡಿ ಉಪಪ್ರೇರಕರು ಇರುವುದಿಲ್ಲ.

ಇ) ಸಾಕ್ಷರ ಭಾರತ್ ಕಾರ್ಯಕ್ರಮಕ್ಕೆ ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರದಿಂದ ಅನುದಾನ ಬಿಡುಗಡೆಯಾದಂತೆ ಪ್ರೇರಕರಿಗೆ ಗೌರವಧನ ನೀಡಲಾಗುತ್ತಿದೆ.

ಅನುಬಂಧ–1

ಕ್ರ.ಸಂ.	ಜಿಲ್ಲೆಯ ಹೆಸರು	ಸಾಕ್ಷರತಾ ಪ್ರಮಾಣ (ಶೇಕಡ)
1	ದಕ್ಷಿಣ ಕನ್ನಡ	88.62
2	ಬೆಂಗಳೂರು ನಗರ	88.48
3	ಉಡುಪಿ	86.29
4	ಉತ್ತರ ಕನ್ನಡ	84.03
5	ಕೊಡಗು	82.52
6	ಶಿವಮೊಗ್ಗ	80.50
7	ಧಾರವಾಡ	80.30
8	ಚಿಕ್ಕಮಗಳೂರು	79.24
9	ಬೆಂಗಳೂರು (ಗ್ರಾ)	78.29
10	ರಾಮನಗರ	69.20
11	ಹಾವೇರಿ	77.60
12	ದಾವಣಗೆರೆ	76.30
13	ಹಾಸನ	75.89
14	ಗದಗ	75.18
15	ಕೋಲಾರ	74.33
16	ಚಿಕ್ಕಬಳ್ಳಾಪುರ	70.08
17	ತುಮಕೂರು	74.32
18	ಬೆಳಗಾಂ	73.94
19	ಚಿತ್ರದುರ್ಗ	73.82
20	ಮೈಸೂರು	72.56
21	ಮಂಡ್ಯ	70.14
22	ಬೀದರ್	71.01
23	ಬಾಗಲಕೋಟೆ	69.39
24	ಬಳ್ಳಾರಿ	67.85
25	ಕೊಪ್ಪಳ	67.28
26	ಬಿಜಾಪುರ	67.20

27	ಗುಲಬರ್ಗಾ	65.65
28	ಯಾದಗಿರಿ	52.36
29	ಚಾಮರಾಜನಗರ	61.12
30	ರಾಯಚೂರು	60.46

ಮಹಾವಿದ್ಯಾಲಯ ಬಿ.ಎಡ್ ಕಾಲೇಜಿಗೆ ಯು.ಜಿ.ಸಿ. ಮಾನ್ಯತೆ

665 (1013) ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರದಲ್ಲಿರುವ ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ (ಬಿಎಡ್) ಕಾಲೇಜನ್ನು ಯುಜಿಸಿ ಹಾಗೂ ಎನ್.ಎ.ಎ.ಸಿ. ನಿಯಮಗಳ ಅನುಸಾರ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ;

ಆ) ಯು.ಜಿ.ಸಿ. ಹಾಗೂ ಎನ್.ಎ.ಎ.ಸಿ. ನಿಯಮಗಳ ಅನುಸಾರ ಮೂಲಭೂತ ಸೌಲಭ್ಯಗಳಿಲ್ಲದಿರುವುದರಿಂದ, ಬೆಂಗಳೂರು ವಿಶ್ವವಿದ್ಯಾಲಯದಿಂದ ಶಾಶ್ವತ ಅನುಮೋದನೆ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಈ ಕಾಲೇಜಿಗೆ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳ ಕೊರತೆಯಿಂದ ಯು.ಜಿ.ಸಿ. ಹಾಗೂ ಎನ್.ಎ.ಎ.ಸಿ. ಯೋಜನೆಗೆ ಒಳಪಡಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಹಾಗಿದ್ದಲ್ಲಿ, ಈ ಕಾಲೇಜನ್ನು ಯು.ಜಿ.ಸಿ. ಹಾಗೂ ಎನ್.ಎ.ಎ.ಸಿ. ಯೋಜನೆಗೆ ಒಳಪಡಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಉ) ಈ ಕಾಲೇಜನ್ನು ಯು.ಜಿ.ಸಿ. ಹಾಗೂ ಎನ್.ಎ.ಎ.ಸಿ. ಯೋಜನೆಗೆ ಒಳಪಡಿಸಿರುವುದರಿಂದ ಸದರಿ ಕಾಲೇಜಿನ ಉಪನ್ಯಾಸಕರುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಊ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರ ಕೂಡಲೇ ಕ್ರಮಕೈಗೊಳ್ಳುವುದೇ?